MADAM SPEAKER.—It is a matter of sufficient public importance, and there is urgency also. I give my consent to the notice. The Leader of the Opposition may ask for the leave for the House.

Sri H. D. DEVE GOWDA —I beg Leave of the House to move the adjournment Motion.

MADAM SPEAKER —I do not think anybody has any objection for this Leave is granted. We will take it up after the Bills are disposed of at 4 P. M. or 4-30 P. M.

2-00 P M.

Business of the House

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲು ಸಿದ್ಧಪಡಿಸಿದ ಕಾರ್ಯಕ್ರಮದ ಪ್ರಕಾರ, ಬೇರೆ ಕಾರ್ಯಕ್ರಮದ ಇದೆ. ಈ ಮಧ್ಯದಲ್ಲಿ ಹಣಕಾಸಿನ ಮಂತ್ರಿಗಳು ತಮ್ಮದೇ ಆದ ಮಸೂದೆ ತಂದಿಟ್ಟಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಎರಡು ಮಸೂದೆಗಳು ಪ್ರಥಮ ಪ್ರಾಶಸ್ತ್ಯ ಪಡೆದಿರಲಿಲ್ಲ. ಒಂದು ವೇಳೆ ಮಸೂದೆಗಳನ್ನೇ ತರಬೇಕೆಂದರೆ ಪ್ರಾಶಸ್ತ್ಯ ಪಡೆದಿರತಕ್ಕ ಬೇರೆ ಮಸೂದೆಗಳು ಇದ್ದವು.

ಅಧ್ಯಕ್ಷರು.—ರೂಲ್ಸಿನ ಚೌಕಟ್ಟಿನಲ್ಲಿ ಸಭೆಯ ನಾಯಕರ ಜೊತೆಗೆ ಮಾತನಾಡಿ ಅಜೆಂಡ ನಿಗದಿ ಮಾಡುವುದಕ್ಕೆ ರೂಲ್ಸಿನಲ್ಲಿ ಅಧಿಕಾರ ನನಗೆ ಇದೆ. ಆದುದರಿಂದ ಅವರನ್ನು ಕನ್‌ಸಲ್ಟ್ ಮಾಡಿ ರಿವೈಜ್ಡ್ ಅಜೆಂಡಾ ಮಾನ್ಯ ಸದಸ್ಯರಿಗೆ ಕಳುಹಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.– ನಾನು ಅಧಿಕಾರದ ಪ್ರಶ್ನೆ ಮಾಡುವುದಿಲ್ಲ ಇಂತಹ ಬಿಲ್ಲನ್ನು ಚರ್ಚೆ ಮಾಡುವಾಗ, ಸದಸ್ಯರು ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ತೀರ್ಮಾನದ ಬಗ್ಗೆ ಆಕ್ಷೇಪಣೆ ಇಲ್ಲ. ನಮ್ಮ ಆಕ್ಷೇಪಣೆ ಸರ್ಕಾರದ ನೀತಿ ನಡತೆ ಬಗ್ಗೆ. ಸರ್ಕಾರದವರು ಹಿಂದೆ ಬಂದಂಥ ಮಸೂದೆಗಳನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಯಾರು ಆಗಿರಬೇಕು, ಸಿದ್ಧತೆ ಮಾಡಿಕೊಂಡಿರಬೇಕು. ಅದು ಬಿಟ್ಟು ಇದನ್ನೇ ತೆಗೆದುಕೊಳ್ಳಿ ಎಂದು ಮೊದಲೆ ತಂದಿಟ್ಟಿರುತ್ತಾರೆ, ಆದುದರಿಂದ ಸರ್ಕಾರದ ನಡತೆ ಸರಿಪಡಿಸಿಕೊಳ್ಳದೇ ಹೋದರೆ ಈ ಸದನದಲ್ಲಿ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯುವುದಿಲ್ಲ.

ಅಧ್ಯಕ್ಷರು.—ಅಜೆಂಡ ಆಗಲೇ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಬೆಳಿಗ್ಗೆ ಎಂಟು ಗಂಟೆಗೆ ನಾವು ಬೆಂಗಳೂರಿಗೆ ಬಂದದ್ದು. ನಾವು ಸಿದ್ಧತೆ ಮಾಡಿಕೊಂಡು ಬಂದದ್ದು ಬೇರೆ ಕೆಲಸಕ್ಕೋಸ್ಕರ.

ಅಧ್ಯಕ್ಷರು —ಪ್ರಾಣ್ಮೆಯುಳ್ಳ ಸದಸ್ಯರು ಯಾವಾಗಲೂ ಯಾವುದಕ್ಕೂ ಸಿದ್ಧರಾಗಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಡೂರಿನ ಬಗ್ಗೆ ಮಸೂದೆ ಮಂಡಿಸಿ ಅದರ ಬಗ್ಗೆ ತೀರ್ಮಾನ ಮಾಡಿಕೊಳ್ಳುವುದಕ್ಕೆ ಕಾತರತೆ ಇಲ್ಲ, ಅದರ ಬದಲು ತೆರಿಗೆ ಹಾಕುವುದಕ್ಕೆ ಸಂಬಂಧಪಟ್ಟ ಮಸೂದೆ ತರಲು ಮುಂದೆ ಬಂದಿದ್ದೀರಿ. ಪ್ರಮುಖವಾದ ಮಸೂದೆಗಳು ಚರ್ಚೆಯಾಗದೆ ಉಳಿದಿದ್ದರೂ ಅವನ್ನು ಗಮನಕ್ಕೆ ತೆಗೆದುಕೊಳ್ಳಿ, ಬೇರೆ ಮಸೂದೆಗಳನ್ನು ಈಗ ಸಭೆಯ ಮುಂದೆ ತಂದಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಯಾವ ಯಾವ ಮಸೂದೆ ತೆಗೆದುಕೊಂಡು ಬರುತ್ತಾರೆ ಎಂದು ಒಂದು ಪಟ್ಟಿ ಮಾಡಿಕೊಡಲಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಪ್ರಿಯಾರಿಟಿ ಬೇಕು ಎಂದು ಯಾರೂ ಮಾತನಾಡಲಿಲ್ಲ. ಈಗ ನೋಡಿದರೆ ಇದಕ್ಕೆ ಪ್ರಿಯಾರಿಟಿ ಕೊಟ್ಟಿದ್ದಾರೆ.

ಅಧ್ಯಕ್ಷರು.—ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇರಲಿಲ್ಲ. ಎಲ್ಲಾ ಗೊತ್ತಿದ್ದ ಹಾಗೆ ಮಾತನಾಡಿದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು ಅಲ್ಲಿ ಕೂಡ ಪ್ರಯಾರಿಟಿ ಕೊಡಲಿಲ್ಲ ಎಂದು. ತಮಗೆ ಏನೋ ಅಧಿಕಾರ ಇದೆ. ಸಭಾ ನಾಯಕರ ಜೊತೆಗೆ ಮಾತನಾಡಿ ಅಜೆಂಡ ಬದಲಾವಣೆ ಮಾಡಲು ಒಂದು ರೀತಿ ನಿಯಮ ಬೇಡವೆ ?

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರಿಗೆ ಇರತಕ್ಕ ಅಧಿಕಾರವನ್ನು ಸರ್ಕಾರದವರು ದುರುಪಯೋಗ ಮಾಡುವುದಕ್ಕೆ ನಾವು ಎಡೆಕೊಡಲಿಕ್ಕೆ ಸಾಧ್ಯವಿಲ್ಲ. ಇವೊತ್ತು ಫೈನಾನ್ಸ್ ಬಿಲ್ಲು ಸಭೆಯ ಅಂಗೀಕಾರ ಪಾಗ್ರತೆ ಪಡೆಯಬೇಕು ಎನ್ನುವ ಈ ದೃಷ್ಟಿಯಿಂದ ಎಲ್ಲಾ ಬಿಸಿನೆಸ್ ಬದಿಗೊತ್ತಿ ಎಂದು ಸಭೆಯ ಮುಂದೆ ಬರುವುದಾದರೆ, ನಮ್ಮ ಪ್ರತಿಭಟನೆ ನಲ್ಲಿಸಬೇಕಾಗುತ್ತದೆ. ಇವೊತ್ತು ನನಗೆ ತಿಳಿದಿರುವ ಹಾಗೆ ರೆವಿನ್ಯೂ ಡಿಮ್ಯಾಂಡ್ ಮೇಲೆ ಚರ್ಚೆಯಾಗಬೇಕಿತ್ತು. ಮತ್ತೆ ಪುನಃ ಅದನ್ನು ಮಾರ್ಪಾಡು ಮಾಡಿ ಸರ್ಕಾರದ ಅಭಿಪ್ರಾಯದ ಪ್ರಕಾರ ಹಣಕಾಸಿಗೆ ಸಂಬಂಧಪಟ್ಟ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಅದರ ಬಗ್ಗೆ ನಾನು ಪ್ರತಿಕ್ರಿಯೆ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ ಸರ್ಕಾರ ಈ ದುರಭ್ಯಾಸ ನಿಲ್ಲಿಸಬೇಕು. ತಾವು ಒಂದು ಮಾತು ಹೇಳಿದಿರಿ. ಬಿಲ್ಲುಗಳನ್ನು ಪಾಸ್ ಮಾಡಿದ ಮೇಲೆ ಶಿಕ್ಷಕರ ಮುಷ್ಕರದ ಬಗ್ಗೆ ನಿಲುವಳಿ ಸೂಚನೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ ಎಂದು. ನಿಲುವಳಿ ಸೂಚನೆಯನ್ನು ಮೊದಲು ಚರ್ಚೆಗೆ ತೆಗೆದುಕೊಂಡು ಅದರ ಬಗ್ಗೆ ಒಂದು ನಿರ್ಣಯ ಆಗಬೇಕು. ಆದು ಆದ ಮೇಲೆ ಸೇರ್ಸ್‌ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ ಚರ್ಚೆಕಾದರೆ ತೆಗೆದು ಕೊಳ್ಳೋಣ.

ಅಧ್ಯಕ್ಷರು —ಚರ್ಚೆ ಆಗಬಾರದು ಎಂದು ಯಾರದೂ ಅಭಿಪ್ರಾಯವಿಲ್ಲ, ಅದರ ಬಗ್ಗೆ ನಿಮಗೆ ಎಷ್ಟು ಆತುರ ಇದೆಯೋ, ಅಷ್ಟೇ ಆತುರ ಎಲ್ಲಾ ಸದಸ್ಯರಿಗೂ ಇದೆ. ಇಲ್ಲದೆ ಹೋದರೆ ಅದನ್ನು ಈವೊತ್ತು ತೆಗೆದುಕೊಳ್ಳುವುದಕ್ಕೆ ಒಪ್ಪುತ್ತಾ ಇರಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮೊದಲು ಅತ್ಯಂತ ಪ್ರಾಮುಖ್ಯವಾದ ಮತ್ತು ಗಹನವಾದ ವಿಷಯದ ಬಗ್ಗೆ ನಿರ್ಣಯ ಆಗಬೇಕು. ಆದರ ಬಗ್ಗೆ ನಿರ್ಣಯ ಮಾಡಿದ ಮೇಲೆ ಫೈನಾನ್ಸ್ ಬಿಲ್ಲು ಇವೊತ್ತು ಪಾಸ್ ಆಗಬೇಕಾದರೆ ಪಾಸ್ ಮಾಡಿಕೊಡುತ್ತೇವೆ. ಈಗ ಮೊದಲು ನಿಲುವಳಿ ಸೂಚನೆ ಬಗ್ಗೆ ಚರ್ಚೆಯಾಗಿ ಅಂತಿಮವಾದ ನಿರ್ಣಯ ಆಗಬೇಕು. ಈ ಸಂಬಂಧವಲ್ಲಿ ಒಬ್ಬ ಸದಸ್ಯರು ಉಪವಾಸ ಮಾಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಬಿಲ್ಲುಗಳು ಆದನಂತರ ತೆಗೆದುಕೊಳ್ಳೋಣ ಎಂದು ಅಧ್ಯಕ್ಷರು ತೀರ್ಮಾನ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಿಲುವಳಿ ಸೂಚನೆ ತೆಗೆದುಕೊಳ್ಳಬಹುದು ಎಂದು ತಾವು ಆಗಲೇ ಅಪ್ಪಣೆ ಕೊಟ್ಟಿದ್ದೀರಿ. ನಾಲ್ಕು ಗಂಟೆ ಮೇಲೆ ತೆಗೆದುಕೊಂಡರೆ ಬಹಳ ಒಳ್ಳೆಯದು. ನಾನು ಇನ್ನೂ ಊಟ ಸಹ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಊಟ ಮಾಡದಿದ್ದರೆ ಪರವಾ ಇಲ್ಲ. ಅಲ್ಲಿ ಒಬ್ಬರು ಆಮರಣ ಉಪವಾಸ ಮಾಡುತ್ತಾ ಇದ್ದಾರೆ.

ಅಧ್ಯಕ್ಷರು.—ವಿಷಯ ಸಂಗ್ರಹಣೆ ಮಾಡಬೇಕು, ಅವನ್ನು ಮಾಡಿಕೊಂಡು ಬರುತ್ತಾರೆ, ಅದಕ್ಕೆ ಮುಂಚೆ ತಾವು ಈ ರೀತಿ ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಸಚಿವಾಲಯಕ್ಕೆ ತಮ್ಮ ನಿಲುವಳಿ ಸೂಚನೆ ಸಿಕ್ಕಿದ ಮೇಲೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಎಲ್ಲಾ ಸಂಗ್ರಹಣೆ ಮಾಡಿ ಕೊಡಬೇಕು ಎಂದು ಈಗಾಗಲೇ ವಿದ್ಯಾಭ್ಯಾನ ಇಲಾಖೆಗೆ ಸೂಚನೆ ಕೊಟ್ಟಿದ್ದೇನೆ. ನಾಲ್ಕು ಗಂಟೆಗೆ ದಯಮಾಡಿ ತೆಗೆದು ಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಹದಿನೈದನೇ ತಾರೀಖಿನಿಂದ ಶಿಕ್ಷಕರು ಮುಷ್ಕರ ಮಾಡಿ ಡಿಮ್ಯಾಂಡ್ ಸರ್ಕಾರದ ಮುಂದೆ ಕೊಟ್ಟಿದ್ದಾರೆ. ಈಗ ವಿಷಯ ಸಂಗ್ರಹಣೆ ಮಾಡಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ, ಅವರು ಈಗಾಗಲೇ ಸಿದ್ಧತೆ ಮಾಡಿಕೊಂಡು ಉತ್ತರ ಕೊಡುವುದಕ್ಕೆ ಸಿದ್ಧರಾಗಿ ಬಂದಿರಬೇಕು.

ಅಧ್ಯಕ್ಷರು.—ಅದನ್ನು ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ. ದೇವೇಗಾಡ.—ಎರಡು ಬಿಲ್ ಪಾಸ್ ಮಾಡಿದ ಮೇಲೆ ನಿಲುವಳಿ ಸೂಚನೆ ತೆಗೆದುಕೊಳ್ಳೋಣ ಎಂದು ಹೇಳಿದರು. ನಾವು ಈ ಬಿಲ್ಲಿನ ಮೇಲೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಈ ಬಿಲ್ಲು ಏನು ಎಂದು ನಾವು ನೋಡಿಯೇ ಇಲ್ಲ.

Sri M. Y. GHORPADE.—The Bill is fully consistent with the Budget.

Sri H. D. DEVE GOWDA.—I did not say it is inconsistent.

Sri M. Y. GHORPADE.—All the details regarding these amendments are given in the budget. It is only in consonance with that. This Bill has been introduced. There is nothing new in that.

Sri H. D. DEVE GOWDA.—Even then, sufficient time is required for the Opposition to give our comments. We cannot simply express our comments.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ವಿವರಣೆ ಕೊಟ್ಟ ಮೇಲೆ ಚರ್ಚೆ ಮಾಡುವುದಾದರೆ, ಅವರು ಮೇಷ್ಟರು ಇದ್ದಾರೆ, ನಾವು ಹುಡುಗರು ಇದ್ದೇವೆ.

ಅಧ್ಯಕ್ಷರು.—ಮಸೂದೆಯನ್ನು ಮಂಡಿಸುವುದು ಬೇಡ ಎಂದು ಹೇಳುತ್ತೀರಾ ? ಇದು ಮಕ್ಕಳಿಗೂ ಉಪಾಧ್ಯಾಯರಿಗೂ ಶಂಬಂಧಪಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬಿಲ್ಲನ್ನು ಮಂಡಿಸಲಿ, ಪರ್ಯಾಲೋಚನೆಗೆ ಅಮೇಲೆ ತೆಗೆದು ಕೊಳ್ಳೋಣ. ನಾವೂ ಕೂಡ ವಿಷಯ ತಿಳಿದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ.

ಅಧ್ಯಕ್ಷರು.—ಮಸೂದೆಯನ್ನು ಮಂಡಿಸಿ ಆಗಿದೆ, ಇದು ಸೆಕೆಂಡ್ ಸ್ಟೇಜ್.

ಶ್ರೀ ಕಾಗೋಡು ತಿಮ್ಮಪ್ಪ.—ತೆರಿಗೆ ವಸೂಲು ಮಾಡುವುದಕ್ಕೆ ಅಧಿಕಾರ ಕೊಟ್ಟು ಆಗಿದೆ. ವಸೂಲು ಮಾಡುತ್ತಾ ಇದ್ದಾರೆ, ಜರೂರಿಲ್ಲ, ಯಾವತ್ತು ಬೇಕಾದರೂ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಎಂ. ಮೈ. ಘೋರ್ಪಡೆ.—ಪ್ರೊವಿಜಿನಲ್ ಟ್ಯಾಕ್ಸ್ ಬಿಲ್ ಪಾಸ್ ಮಾಡಿದ್ದೇವೆ. ಅದರ ಪರಿಣಾಮವಾಗಿ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಮೇ 22ನೇ ತಾರೀಖು ಅವಧಿ ಮುಗಿಯುತ್ತದೆ. ಅದಕ್ಕಿಂತ ಮುಂಚೆ ಪಾಸ್ ಆಗಬೇಕು. ಇಷ್ಟೇ ಅಲ್ಲ, ಕೌನ್ಸಿಲ್‌ನಲ್ಲೂ ಪಾಸಾಗಬೇಕು ; ಕಾಲಾವಧಿ ಇಲ್ಲ.

ಎಚ್. ಡಿ. ದೇವೇಗೌಡ.—ಕೌನ್ಸಿಲ್ ಮುಂದಿನ ತಿಂಗಳು 1ನೇ ತಾರೀಖು ಸೇರುತ್ತದೆ ಆದುದರಿಂದ ಇವತ್ತೇ ಪಾಸಾದರೇನು ? ನಾಳೆ ಪಾಸಾದರೇನು ?

Sri M. Y. GHORPADE.—I am prepared to be guided by you as to the exact time when it has to be taken up. But, it will have to be done within a certain period.

ಶ್ರೀ ಎಚ್. ಡಿ. ದೇವೇಗೌಡ.—ಕೌನ್ಸಿಲ್ ತುರುವಾಗುವುದಕ್ಕೆ ಮುಂಚೆ ಪಾಸಾಗಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ದಿವಸ ಕಾರ್ಯಕ್ರಮದ ಪಟ್ಟಿ ಬದಲಾಯಿಸಬೇಕಾದರೆ, ಹಿಂದಿನ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿತ್ತು. ಆ ತೀರ್ಮಾನ ಇದಲ್ಲ. ಅದರ ಪ್ರಕಾರ ಕಾರ್ಯಕ್ರಮದ ಪಟ್ಟಿ ಬರಬೇಕಾಗಿತ್ತು.

ಅಧ್ಯಕ್ಷರು.—ಕಾರ್ಯಕ್ರಮವೊಂದನ್ನು ಸರ್ಕುಲೇಷನ್‌ಗೆ ಕಳುಹಿಸಿತು. ತಿರುಗಿ ಪರ್ಯಾಲೋಚನೆ ಮಾಡುವ ನಂದರ್ಭ ಬಂತು ; ರಿಪ್ಲೈಸ್ಡ್ ಅಜೆಂಡಾ ಕಳುಹಿಸಿ 2-3 ದಿವಸ ಆಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ಮುಖ್ಯ ಮಸೂದೆ ಏಕೆ ತೆಗೆದುಕೊಳ್ಳಲಿಲ್ಲ ?

ಅಧ್ಯಕ್ಷರು.—ಮಹತ್ವವಾದದ್ದನ್ನೇ ತೆಗೆದುಕೊಳ್ಳೋಣ. ಆದರೆ ತಮ್ಮ ಮನಸ್ಸಿನಲ್ಲೇನಿದೆಯೋ ಗೊತ್ತಿಲ್ಲ.